**ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ, ಇವರ ನ್ಯಾಯಾಲಯದಲ್ಲಿ**

ದಿನಾಂಕ **16** ನೇ ಏಪ್ರೀಲ್, **2021**

**ಸಿ.ಸಿ.ನಂ ಃ 1419/2020**

ಶ್ರೀ ಅನಂತಪದ್ಮನಾಭ ಕ್ರೆಡಿಟ್
ಕೋ ಅಪರೇಟಿವ್ ಸೊಸೈಟಿ ನಿಯಮಿತ,
ಹೆಬ್ರಿ.
ಪ್ರತಿನಿಧಿಸುವವರು ಃ ಕಾರ್ಯದರ್ಶಿ/ಅಥೊರೈಸ್ಡ್ ಸೈನೆಟರಿ,
ಶ್ರೀ ಹೆಚ್ ಶಿವರಾಮ ಸೋಮಯಾಜಿ,
ಪ್ರಾಯಃ **43** ವರ್ಷ
ತಂದೆಃ ರಘುರಾಮ ಸೋಮಯಾಜಿ
ವಾಸಃ ಬಳ್ಳಿ ಹೌಸ್,
ಹೆಬ್ರಿ ಅಂಚೆ ಮತ್ತು ಗ್ರಾಮ,
ಹೆಬ್ರಿ ತಾಲೂಕು, ಉಡುಪಿ ಜಿಲ್ಲೆ .... ಫಿರ್ಯಾದಿದಾರರು

- ವಿರುದ್ಧ -

ಜನಾರ್ಧನ್ ನಾಯಕ್
ಪ್ರಾಯಃ **60** ವರ್ಷ
ತಂದೆ ಃ ಲಕ್ಷ್ಮಣ್ ನಾಯಕ್
ವಾಸಃ ಕಾಮಕ್ಷಿ,
ಅನಂತಪದ್ಮನಾಭ ದೇವಸ್ಥಾನದ ಹತ್ತಿರ,
ಹೆಬ್ರಿ ಅಂಚೆ ಮತ್ತು ಗ್ರಾಮ,
ಹೆಬ್ರಿ ತಾಲೂಕು, ಉಡುಪಿ ಜಿಲ್ಲೆ- **576112** .... ಆರೋಪಿ

## ಆಪಾದನೆಯ ಸಾರಾಂಶ

ದಿನಾಂಕ **17.07.2017** ರಂದು ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯಿಂದ ಲೋನ್ ಸಂಖ್ಯೆ ಬಿ.ಎಲ್.**03/17** ರಲ್ಲಿ ರೂ.**50,00,000/-** ಗಳನ್ನು ಸಾಲವಾಗಿ ಪಡೆದುಕೊಂಡಿದ್ದು, ಸದ್ರಿ ಸಾಲದ ಮರುಪಾವತಿಯ ಸಲುವಾಗಿ ದಿನಾಂಕ **09.03.2020**

ರಂದು ರೂ.**32,70,000/-** ಗಳಿಗೆ ಕೆನರಾ ಬ್ಯಾಂಕ್, ಹೆಬ್ರಿ ಶಾಖೆಯ ಚೆಕ್ಕು ಸಂಖ್ಯೆ **767210** ನ್ನು ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದಿ ಸಂಸ್ಥೆಯು ನಗಧೀಕರಿಸಲು ಫೆಡ್ರಲ್ ಬ್ಯಾಂಕ್ ಲಿ. ಹೆಬ್ರಿ ಶಾಖೆಗೆ ಹಾಜರುಪಡಿಸಿದ್ದು, ಸದರಿ ಚೆಕ್ಕು ಮಾನ್ಯಗೊಳ್ಳದೆ ದಿನಾಂಕ **09.03.2020** ರಂದು 'Funds insufficient' ಎಂಬ ಹಿಂಬರಹದೊಂದಿಗೆ ಹಿಂತಿರುಗಿ ಬಂದಿದ್ದು, ತದನಂತರ ದಿನಾಂಕ **19.03.2020** ರಂದು ವಕೀಲರ ಮೂಲಕ ನೋಟಿಸ್ ಜಾರಿ ಮಾಡಿದ್ದು, ಸದ್ರಿ ನೋಟಿಸನ್ನು ಸ್ವೀಕರಿಸಿಕೊಂಡಿದ್ದು, ಆದರೂ ಈವರೆಗೂ ಸದರಿ ಚೆಕ್ಕಿನ ಬಾಬ್ತು ಹಣವನ್ನು ಫಿರ್ಯಾದಿ ಸಂಸ್ಥೆಗೆ ನೀಡದೆ, ಆ ಮೂಲಕ ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ **138** ರ ಕೆಳಗೆ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಪ್ರಶ್ನೆ **1**ಃ ನಿಮಗೆ ಮೇಲೆ ಓದಿ ಹೇಳಿದ ಆಪಾದನೆ ಅರ್ಥವಾಯಿತೇ?

ಉತ್ತರ ಃ

ಪ್ರಶ್ನೆ 2ಃ ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಪ್ರತಿರಕ್ಷೆ ಮಾಡಿಕೊಳ್ಳಲು ಬಯಸುತ್ತೀರಾ?

ಉತ್ತರ ಃ

(ಈ ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿಸಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಳ್ಳಲಾಗಿದೆ ಅಂತ ದೃಢೀಕರಿಸುತ್ತೇನೆ)

ಎ.ಹೆ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.,
ಕಾರ್ಕಳ